



# ಅರಿವಿನ ಹೆರಿಗೆ

**ಮೂರು ಭಿನ್ನ ವಿಚಾರಧಾರೆಯ ಕವಲುಗಳು ವೃತ್ತವೊಂದರಲ್ಲಿ ಸಂಧಿಸಿ, ಸಂದರ್ಭಚಕ್ರದ ಸುಳಿಯಲ್ಲಿ ಅರಿವಿನ ಬೆಳಗು ಮೂಡುವ ಮೂಲಕ ವಿಚಾರ ಬದಲಾಗುವ ಪ್ರಕ್ರಿಯೆ ಇಲ್ಲಿದೆ.**

■ ರಾಘು

**ಕಿರುಚಿತ್ರ:** ಪ್ರಕೃತಿ
**ನಿರ್ದೇಶನ:** ಪ್ರವೀಣ್ ಸಿ., ಕಿರಣ್ ಕುಮಾರ್, ಪ್ರವೀಣ್ ಕುಮಾರ್ ಎ.
**ತಾರಾಗಣ:** ಅಕ್ಷಯ, ಚೇತನ, ಜಿಕೆ. ಕಿರಣ್, ಕುಮಾರ್, ರಕ್ಷಿರ ಯು.ವಿ., ಶ್ರುತಿ ಕುಶಾಲ್, ಮೋನಿ
**ನಿರ್ಮಾಣ:** ಪಿಕೆಪಿ
**ಸಂಗೀತ:** ಶರತ್ ಶ್ರೀನಿವಾಸ ಶರ್ಮ

‘ಆರತಿಗೊಬ್ಬಳು ಕೀರ್ತಿಗೊಬ್ಬ’ ಎಂಬ ಘೋಷ ವಾಕ್ಯ ಹಳಸಿಹೋಗಿದೆ. ಹೆಣ್ಣಾಗಲಿ ಗಂಡಾಗಲಿ ಮಗು ಒಂದೇ ಇರಲಿ ಎನ್ನುವ ಕಾಲ ದಾಟಿ ಹೆಣ್ಣು–ಗಂಡು ಎರಡೂ ಅಲ್ಲದ ಮೂರನೇ ಲಿಂಗವೂ ಆಗಬಹುದು ಎನ್ನುವ ಸತ್ಯವನ್ನು ಒಪ್ಪುವ ಹೊತ್ತಿಗೆ ಬಂದು ನಿಂತಿದ್ದೇವೆ.

ಕಾಲಘಟ್ಟದ ತುಡಿತ ಮಿಡಿತಗಳು ಕಣ್ಣೆದುರಿಗೆ ಸಾಲು ಸಾಲು ಘಟಿಸಿದರೂ ವೈಯಕ್ತಿಕ ಸಂಗತಿ ಬಂದಾಗ ಅದನ್ನು ಒಪ್ಪದೆ ಪಳೆಯುಳಿಕೆಯ ತಿಪ್ಪೆಯನ್ನು ಕೆದರುತ್ತೇವೆ. ಇಲ್ಲಿಯೂ ಅದೇ ಗೋಚರಿಸುತ್ತದೆ. ಈ ಹೊತ್ತಿನ ಆಧುನಿಕ ಸಮಾಜದಲ್ಲಿಯೂ ‘ಮಗು ಗಂಡೇ ಆಗಬೇಕು’ ಎನ್ನುವ ಹಪಹಪಿ ಕಡಿಮೆಯೇನೂ ಆಗಿಲ್ಲ. ಭದ್ರತೆಯ ಭರವಸೆ ಗಂಡಿನಲ್ಲಿಯೇ ಎನ್ನುವ ಪೂರ್ವಗ್ರಹ ಭಾವ ಎದೆಯೊಳಗೆ ಹೇಗೋ ಮೊಳಕೆಯೊಡೆಯುತ್ತದೆ. ಮೊಮ್ಮಗ ಕೊಟ್ಟರೆ ಸಾಕಪ್ಪ ಎಂದು ತಾತ ನಿಂತಲ್ಲೇ ತಿರುಪತಿಗೆ ಕೈ ಮುಗಿದು ಬೇಡುತ್ತಾರೆ.

ಏಳೆಂಟು ನಿಮಿಷಗಳ ಕಿರುಚಿತ್ರ ‘ಪ್ರಕೃತಿ’ ಮನುಷ್ಯನ ನಿರ್ಭಾವುಕತೆಯನ್ನು ಎಚ್ಚರಿಸುವಂತೆ ಕಾಣಿಸುತ್ತದೆ. ನಿಸರ್ಗ ಸಹಜ ಹೊಸ ಹುಟ್ಟಿನ ರಹಸ್ಯದಲ್ಲಿ ಮನುಷ್ಯನಿಗೆ ಇರಬಹುದಾದ ಸ್ವಾರ್ಥ ಬಯಕೆಯನ್ನು ಪ್ರಶ್ನೆ ಮಾಡುತ್ತದೆ. ಇಲ್ಲಿ ಮೂರು ರೀತಿಯ ಮನೋಸ್ಥಿತಿಯನ್ನು ಬಯಲು ಮಾಡುತ್ತದೆ. ವಿರಳ ಶಬ್ದಗಳಲ್ಲಿ ದೃಶ್ಯದ ಮೂಲಕವೇ ಭಾವ ವ್ಯಾಪಾರವನ್ನು ನಡೆಸುತ್ತದೆ. ಸಿನಿಮಾದ ಅನುಸಂಧಾನದ ಗುರಿ ಎರಡು ರೀತಿಯ ಸಂರಚನೆಯನ್ನು ಒಳಗೊಂಡಿದೆ. ಒಂದು ಪರಂಪರೆಯ ಬಳುವಳಿಯಾಗಿ ಬಂದಿರುವ ಸಂತಾನದ ಬಯಕೆ, ಮತ್ತೊಂದು ಹುಟ್ಟುವ ಮಗು ಗಂಡೇ ಆಗಬೇಕು ಎನ್ನುವ ಹಳಹಳಿಕೆ. ಕಥೆ ಅದರಾಚೆಯ ಆಧುನಿಕೋತ್ತರ ಮನೋಸ್ಥಿತಿಯ ಬಯಕೆಯನ್ನೂ ಪ್ರಸ್ತಾಪಿಸುತ್ತದೆ. ಅದನ್ನು ಹುಟ್ಟುವ ಮಗುವಿನ ಅಗತ್ಯದ ಹಣಕಾಸಿನ ಲೆಕ್ಕಾಚಾರಕ್ಕೆ ಸೀಮಿತಗೊಳಿಸುತ್ತದೆ. ಅದರಾಚೆಗೆ ಸಂತಾನವೇ ಬೇಡ ಎನ್ನುವ ಹಾಗೂ ಸಂತಾನ ಇರಲಿ, ಸಂಸಾರದ ಕಟ್ಟುಕಟ್ಟಳೆ ಬೇಡ ಎನ್ನುವ ಏಕಪೋಷಕ ಬಯಕೆಯ ಬಗ್ಗೆ ಚಿತ್ರ ಏನನ್ನೂ ಹೇಳುವುದಿಲ್ಲ.

ಪ್ರಕೃತಿ ತನ್ನ ಒಡಲ ಗರ್ಭ ಸೀಳಿ ಜೀವ ಸೃಷ್ಟಿಸುವ ಜೈವಿಕ ಕ್ರಿಯೆಗೆ ಯಾವ ನಿರ್ಬಂಧವೂ ಇರಕೂಡದು ಎನ್ನುವುದನ್ನೇ ಚಿತ್ರ ಬಿಂಬಿಸುತ್ತದೆ. ಗರ್ಭಿಣಿಯೊಬ್ಬಳು ಆಸ್ಪತ್ರೆಯ ಹೆರಿಗೆ ಕೋಣೆ ಸೇರಿದ್ದಾಳೆ. ನವಜೋಡಿಗೆ ನವಜೀವವೊಂದು ಹೊರಲಾರದ ಜವಾಬ್ದಾರಿ. ಬೇಡದ ಭ್ರೂಣವನ್ನು ತೆಗೆಸಲು ಆಸ್ಪತ್ರೆಯ ಅಂಗಳ ಹೊಕ್ಕಿದೆ. ಕಾರ್ತಿ ಎಂಬಾತನ ತಾಯಿಗೆ ಮೊಮ್ಮಗು ಆಡಿಸಲು ಬೇಕಾಗಿದೆ. ಆದರೆ ಅವನ ಪತ್ನಿಗೆ ಮಗು ಆಗುವುದಿಲ್ಲ ಎಂದು ಗರ್ಭಪರೀಕ್ಷಾ ವರದಿ ಹೇಳುತ್ತದೆ. ಆ ವರದಿ ಹೊತ್ತು ತವಕದಲ್ಲಿ ವೈದ್ಯರ ಬಳಿ ಸಾಗಿದ್ದಾನೆ.

ಭಿನ್ನ ಬಯಕೆಯ ಗರ್ಭ ಹೊತ್ತ ಆಸ್ಪತ್ರೆ ಎಲ್ಲರಿಗೂ ಅರಿವಿನ ಹೆರಿಗೆಯನ್ನು ಮಾಡಿಸುತ್ತದೆ. ಸಂತಾನ ನಿರಾಕರಿಸಿದ ಜೋಡಿಗೆ, ನವಜಾತ ಶಿಶುವಿನ ಅಳು, ‘ಇರಲಿ ನಮಗೂ ಒಂದು ಕೂಸು’ ಎನ್ನುವ ಬಯಕೆಯನ್ನು ಹುಟ್ಟಿಸುತ್ತದೆ. ಹೆಣ್ಣಾದರೇನು ಗಂಡಾದರೇನು ಮಗುವೊಂದಿರಲಿ ಎನ್ನುವ ಮನೋಪರಿವರ್ತನೆ ಗರ್ಭಿಣಿಯ ತಂದೆಯಲ್ಲಿ ಮೂಡುತ್ತದೆ. ಸಂತಾನಹೀನ ಚಿಂತನೆಯಲ್ಲಿ ಮೊಳಗಿದ್ದ ಯುವಕ ವರದಿಯನ್ನೆಲ್ಲಾ ಹರಿದು ಹಾಕುತ್ತಾನೆ. ಬದಲಾವಣೆ ಅಷ್ಟು ಸುಲಭವೇ ಎನ್ನುವ ಪ್ರಶ್ನೆಯನ್ನು ಮಾತ್ರ ಕಿರುಚಿತ್ರ ಉಳಿಸುತ್ತದೆ. ಯಾವ ವಿಚಾರವೂ ಸಂಘರ್ಷರಹಿತವಾಗಿ ರಾಜೀಮನೋಭಾವದಲ್ಲಿ ಒಳಿತನ್ನು ಒಪ್ಪುವ ಸೂತ್ರವನ್ನು ಸಾಧಿಸಿದೆ ಎಂದು ಅನ್ನಿಸುತ್ತದೆ.

ತಾಯಿ ತನ್ನ ಕರುಳಕುಡಿಗೆ ಜನ್ಮ ನೀಡುವ ಕ್ರಿಯೆ ಆಕೆಗೆ ಸಿಗುವ ಮರುಹುಟ್ಟೇ ಸರಿ ಎನ್ನುವ ಭಾವವನ್ನು ಗರ್ಭಿಣಿ ಅನುಸಂಧಾನ ಮಾಡುತ್ತಾಳೆ. ಒಂದೇ ಒಂದು ಮಾತನಾಡದೆ ಮನಮುಟ್ಟುವಂತೆ ಆಕೆ ನಿವೇದಿಸಿಕೊಳ್ಳುವ ವೇದನೆ ಮಾತ್ರ ದಟ್ಟವಾಗಿ ಕಾಡುತ್ತದೆ. ತೃತೀಯ ಲಿಂಗಿಯ ಪಾತ್ರಧಾರಿ ಸುಧಾರಣೆಯ ಸೂತ್ರವನ್ನು ಹಿಡಿದು ಆಡಿಸುತ್ತಿದ್ದಾಳೆ. ಆಕೆಯ ಒಂದೊಂದು ಪ್ರಶ್ನೆಯೂ ಮನುಷ್ಯತ್ವವನ್ನು ಹುಡುಕಿಸುತ್ತದೆ. ಗಂಡು–ಹೆಣ್ಣು ಹೊರತಾಗಿ ಮೂರನೇ ಲಿಂಗ ಮತ್ತೊಂದಿದೆ ಎನ್ನುವುದನ್ನು ಹೇಳುತ್ತಲೇ ಜಾತಿ, ಭಾಷೆ, ಬಡವ, ಶ್ರೀಮಂತ ಎಂಬ ಭೇದಭಾವವನ್ನು ಯಾವಾಗ ಬಿಡ್ತೀವೋ ಎಂದು ಪ್ರಶ್ನಿಸುತ್ತಾಳೆ. ಹುಟ್ಟಿನ ರಹಸ್ಯವನ್ನು ಹಾಗೆಯೇ ಸ್ವೀಕರಿಸಬೇಕು ಎನ್ನುವ ತಾತ್ವಿಕ ಪ್ರಶ್ನೆಗಳೇ ‘ಪ್ರಕೃತಿ’ ಕಿರುಚಿತ್ರದ ಹೂರಣ.

ಈ ಕಿರುಚಿತ್ರ ವೀಕ್ಷಣೆಗೆ
bit.ly/34yJVqF
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.